Regd No B C 155 ೨ 13-2-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಬೆಳಗಾಂ ವಿಭಜನೆಗೆ ನಿರಾಕರಣೆ

ಕ್ರಿಮಿನಲ್ ಕೋರ್ಟಿನ ಮೇಲೆ ಧಾಳಿ

ನ್ಯೂಯಾರ್ಕ್— ಚಿಕಾಗೆದೇ ಪಿತೂರಿ ವಿಚಾರಣೆಯಲ್ಲಿ ಪ್ರತಿವಾದಿಗಳು ಮತ್ತು ವಕೀಲರುಗಳಿಗೆ ಜೈಲುವಾಸ ವಿಧಿಸಿರುವುದನ್ನು ಪ್ರತಿಭಟಿಸಿ ನ್ಯೂಯಾರ್ಕು ಕ್ರಿಮಿನಲ್ ಕೋರ್ಟು ಕಟ್ಟಡದ ಮೇಲೆ 5000 ಜನರ ಗುಂಪು ಮಂಜಿನಗೆಡ್ಡೆಗಳನ್ನು ಎಸೆಯಿತು – ಅನೇಕ ಪೋಲೀಸರು ಗಾಯಗೊಂಡರು – ಅನೇಕ ಪ್ರದರ್ಶನಕಾರರು ಬಂಧಿಸಲ್ಪಟ್ಟರು.

★

ಕ್ರಿಕೆಟ್ ಆಟಗಾರರಿಗೆ ಆಜ್ಞೆ

ಲಂಡನ್— ಇಂಗ್ಲೆಂಡಿನಲ್ಲಿ ಈ ಬೇಸಿಗೆಯಲ್ಲಿ ಪ್ರವಾಸ ಮಾಡುವ ದಕ್ಷಿಣ ಆಫ್ರಿಕಾ ಕ್ರಿಕೆಟ್ ಟೀಂನೊಡನೆ ವೆಸ್ಟ್ ಇಂಡೀಸ್ ಕ್ರಿಕೆಟ್ಟಿನವರು ಆಟವಾಡಬಾರದೆಂದು ಆಜ್ಞೆ ಕೊಡಲಾಗಿದೆಯೆಂದು ಅದರ ನಾಯಕ ಜೆಯೋಫ್ ಕ್ರಾಫರ್ಡ್ ಹೇಳಿದರು

○

ಜಾಕ್‌ಪಾಟ್

ಬೊಂಬಾಯಿ— ನಿನ್ನೆ ರೇಸ್‌ಕೋರ್ಸ್‌ನಲ್ಲಿ ಜಾಕ್‌ಪಾಟ್‌ನಲ್ಲಿ 2 ಟಿಕೇಟುಗಳಿಗೆ ತಲಾ ರೂ 395860.50 ದೊರೆಯಿತು

ನೀರಿನ ವ್ಯಾಜ್ಯ

ಬೆಂಗಳೂರು— ಕಾವೇರಿ ನೀರಿನ ಉಂತರ ರಾಜ್ಯಗಳ ಹಂಚಿಕೆಯ ಬಗ್ಗೆ ಕೇಂದ್ರದ ಸೂಚನೆಗಳ ವಿಷಯದಲ್ಲಿ ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿ ಡಾ || ಕೆ ಎಲ್ ರಾವ್ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರಿಗೆ ಬರೆದಿರುವರು.

○

ಲಾಠಿಛಾರ್ಜಿನ ಆರೋಪ

ಬೆಂಗಳೂರು— ತಾವು ಗುಲ್ಬರ್ಗಾದಲ್ಲಿ ಭಾಷಣ ಮಾಡುತ್ತಿದ್ದ ಒಂದು ಶಾಂತಿಯುತ ಬಹಿರಂಗ ಸಭೆಯಲ್ಲಿ ಪೋಲೀಸರು ಲಾಠಿ ಛಾರ್ಜು ಮಾಡಿದರೆಂದು ಸಾರ್ವಮೆಂಟು ಪದಸ್ಥ ಯಂಗ್‌ಟರ್ಕ್ ಶ್ರೀ ಎಸ್ ಚಂದ್ರಶೇಖರ್ ಆಪಾದಿಸಿರುವರು – 20 ಮಂದಿ ಗಾಯಗೊಂಡರೆಂದೂ, 6 ಮಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟರೆಂದೂ ಹೇಳಿದರು

●

ಚಿಕ್ಕ ಕಾರು ಪ್ರಾಜೆಕ್ಟ್

ನವದೆಹಲಿ— ಚಿಕ್ಕ ಕಾರಿನ ಪ್ರಾಜೆಕ್ಟಿಗೆ ಕೈಗಾರಿಕಾ ಅಭಿವೃದ್ಧಿ ಸಚಿವಾಲಯವು ರಾಷ್ಟ್ರೀಕರಣ ಹೊಂದಿ ಬ್ಯಾಂಕುಗಳ ನೆರವನ್ನು ಕೇಳುವ ಸಂಭವವಿದೆ.

ಕೇಂದ್ರಕ್ಕೆ ಹೊಸ ಮಂತ್ರಿಗಳು

ನವದೆಹಲಿ— ಕೇಂದ್ರ ಮಂತ್ರಿಮಂಡಲದಲ್ಲಿ ಖಾಲಿಯಾಗಿರುವ ನಾಲ್ಕು ಸ್ಥಾನಗಳಲ್ಲಿ ಎರಡಕ್ಕೆ ಶ್ರೀ ಜಿ ಎಲ್ ನಂದ ಮತ್ತು ಶ್ರೀ ಡಿ ಸಂಜೀವಯ್ಯನವರನ್ನು ನೇಮಿಸಲಾಗಿದೆ.

★

ಮಂತ್ರಿಗಳ ಹಿತಬೋಧೆ

ಬಿಜಾಪುರ – ಪುರಸಭೆಗಳು, ನೀರು ಸರಬರಾಜು, ಚರಂಡಿ ಮತ್ತು ನೈರ್ಮಲ್ಯ ಆರೋಗ್ಯಗಳ ಕಡೆಗೆ ಪ್ರಥಮ ಲಕ್ಷ್ಯವಿಕೊಡಬೇಕೆಂದು ಪೌರಾಡಳಿತ ಮಂತ್ರಿ ಶ್ರೀ ಬಿ ಎಂ ಪಾಟೀಲರು. ಬಿಜಾಪುರ ಜಿಲ್ಲಾ ಪೌರಸಭಾಧ್ಯಕ್ಷರ ಮತ್ತು ಅಧಿಕಾರಿಗಳ ಸಮ್ಮೇಳನದ ಸಮಾರೋಪ ಭಾಷಣದಲ್ಲಿ ಹೇಳಿದರು.

○

ನೆಕ್ಸಲೈಟರ ದಸ್ತಗಿರಿ

ಅನಂತಪುರ— ನಲ್ಲಬೆರವು ಗ್ರಾಮದಲ್ಲಿ ಕಳೆದ ಡಿಸೆಂಬರಿನಲ್ಲಿ ಧಾಳಿ ನಡೆಸಿದ 6 ಮಂದಿ ನಕ್ಸಲೈಟರು ದಸ್ತಗಿರಿ ಮಾಡಲ್ಪಟ್ಟರು.

★

ಇದಕ್ಕೂ ಸಮಿತಿಗಳು

ನವದೆಹಲಿ— ಅಕ್ಕಿ ಮತ್ತು ದ್ವಿದಳ ಧಾನ್ಯಗಳ ಅಭಿವೃದ್ಧಿಗೆ ಭಾರತ ಸರಕಾರ ಎರಡು ಸಮಿತಿಗಳನ್ನು ನೇಮಿಸಿದೆ.

★

ಬೈಠಕ್ ಮುಷ್ಕರ

ಮದರಾಸು— ಪೆರಡಲೂರಿನ ಸ್ಟ್ಯಾಂಡರ್ಡ್ ಮೋಟಾರು ಫ್ಯಾಕ್ಟರಿಯಲ್ಲಿ ತಮ್ಮ ಬೇಡಿಕೆ ಪೂರೈಸಲ್ಪಡುವುದಕ್ಕಾಗಿ ಕಾರ್ಮಿಕರು ತಾ|| 12 ರಿಂದ ಬೈಠಕ್ ಮುಷ್ಕರ ನಡೆಸುತ್ತಿರುವರು.

ಬೆಳಗಾಂ !

ಬೆಂಗಳೂರು— ಕಾಂಗ್ರೆಸ್ ಒಡೆಯುವುದಕ್ಕೆ 6 ತಿಂಗಳ ಮುಂಚೆ, ಕೇಂದ್ರ ಮತ್ತು ಮಹಾರಾಷ್ಟ್ರದಲ್ಲಿ ಪ್ರಮುಖ ಸ್ಥಾನಮಾನ ಹೊಂದಿರುವ ಕೆಲ ಪ್ರಮುಖರು ಬೆಳಗಾಂ ವಿಭಜಿಸುವ ಸಲಹೆಯನ್ನು ತಮಗೆ ಸೂಚಿಸಿದರೆಂದೂ, ತಾವು ಅದನ್ನು ಸಂಪೂರ್ಣವಾಗಿ ತಿರಸ್ಕರಿಸಿದೆನೆಂದೂ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಿಳಿಸಿದರು.

○

ನಾಯಬಾಹಿರ ಮಕ್ಕಳು

ಜಾಂಜಿಬಾರ್— ನ್ಯಾಯಬಾಹಿರವಾಗಿ ಜನಿಸುವ ಮಕ್ಕಳ ಸಂಬಂಧವಾಗಿ ಜಾಂಜಿಬಾರು ಸರಕಾರ ಹೀಗೆ ಆಜ್ಞೆ ನೂಡಿದೆ– ಅವಿವಾಹಿತ ಸ್ತ್ರೀಯಳ ಮಗುವಿನ ತಂದೆಗೆ 5 ವರ್ಷ ಕಠಿಣ ಶಿಕ್ಷೆ ವಿಧಿಸಲಾಗುವುದು; ಅವಿವಾಹಿತ ತಾಯಿ ಮಗುವಿನ ತಂದೆಯ ಹೆಸರನ್ನು ತಿಳಿಸದಿದ್ದರೆ, ಅವಳು ತಿಳಿಸುವವರೆಗೂ ಅವಳನ್ನು ನಿರ್ಬಂಧದಲ್ಲಿಡಲಾಗುವುದು ; ಅವಳು ಸುಳ್ಳು ವರ್ತಮಾನ ಕೊಟ್ಟರೆ 1 ವರ್ಷಕ್ಕೆ ಕಡಮೆ ಇಲ್ಲದ ಜೈಲುವಾಸ ವಿಧಿಸಲಾಗುವುದು ; ಸ್ಕೂಲಿನಲ್ಲಿರುವ ಅವಿವಾಹಿತ ಹುಡುಗಿ ಗರ್ಭಿಣಿಯಾದರೆ ಅವಳನ್ನು ಸ್ಕೂಲಿನಿಂದ ಹೊರದೂಡಲಾಗುವುದು – ಈ ಆಜ್ಞೆ ವಿಧವೆಯರಿಗೆ ಅಥವಾ ವಿವಾಹವಿಚ್ಛೇದಿತರಾಗಿರುವವರಿಗೆ ಅನ್ವಯಿಸುವುದಿಲ್ಲ.

○

ಸಾಂಟೊ ಡೊಮಿಂಗೊ — ಒಂದು ವಿಮಾನ ಕಾರಿಬ್ ಸಮುದ್ರಕ್ಕೆ ಬಿದ್ದು 97 ಮಂದಿ ಸತ್ತರು.

○

ರಯೋಡಿಜನೀರೊ— ಭಾರತ ರಾಯಭಾರಿ ಕಚೇರಿಯ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ದೀಕ್ಷಿತ್ ಕಾಣೆಯಾಗಿದ್ದಾರೆ.

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು.

ಬಾಹುಸಾರ್ ಕಂಪೆನಿ. ನೂರಡಿ ರಸ್ತೆ, ಮೈಸೂರು-4

11 ವರ್ಷದ ಹುಡುಗಿ, ಅವಳಿಜವಳಿ ಮಕ್ಕಳನ್ನು ತಾಯಿ

ಮ್ಯಾಡ್ರಿಡ್— ಆಗ್ನೇಯ ಸ್ಪೇನಿನ ಜೆಹೆರ್ಗಿನಲ್ಲಿ 11 ವರ್ಷದ ಒಬ್ಬ ಹುಡುಗಿ ಅವಳಿಜವಳಿ ಮಕ್ಕಳನ್ನು ಹೆತ್ತಿಳು ; ಆ ಪೈಕಿ ಹೆಣ್ಣು ಮಗು ಸತ್ತುಹೋಯಿತು : ಗಂಡು ಮತ್ತು ತಾಯಿ ಆರೋಗ್ಯವಾಗಿದ್ದಾರೆ.

ಎತ್ತಿಕೊಂಡು ಹೋಗಬಹುದಾದ ವಿಮಾನ

ಮಾಸ್ಕೊ— ರಷ್ಯಾದಲ್ಲಿನ ಕೆವಿಯ ಮೂರು ಮಂದಿ ಎಂಜಿನಿಯರರು ಒಬ್ಬ ಮನುಷ್ಯ ಕೂತುಕೊಂಡು ಹೋಗಲನುಕೂಲವಾದ, ಗಂಟೆಗೆ ನೂರು ಮೈಲಿ ವೇಗ ದಲ್ಲಿ ಹೋಗಬಲ್ಲ, ಹೊತ್ತುಕೊಂಡು ಹೋಗಲನುಕೂಲವಾದ ಚಿಕ್ಕ ವಿಮಾನ ತಯಾ ರುಮಾಡಿದ್ದಾರೆ. ಇದು ಹೊರಡಲೂ ಇಳಿಯಲೂ ಮೂರು ಮಿಾಟರು ಸ್ಥಳ ಸಾಕು. ಇದನ್ನು ನಡೆಸಲು ಮೋಟಾರು ಸೈಕಲ್ ನಡೆಸುವಷ್ಟೇ ತಿಳುವಳಿಕೆ ಸಾಕು.

ತಲವಾಡಿಗಾಗಿ ಚಳವಳ

ಮೈಸೂರು— ಮೈಸೂರು ರಾಜ್ಯದಲ್ಲಿ ತಲವಾಡಿಯ ಸೇರ್ಪಡೆಗೆ ಒತ್ತಾಯ ಮಾಡಲು ಕನ್ನಡ ಚಳವಳಿಗಾರರು, ರಾಜ್ಯಾದ್ಯಂತ ಬಂದ್ ಏರ್ಪಡಿಸಲರುವರೆಂದು ಶ್ರೀ ವಾಟಾಳ್ ನಾಗರಾಜರು ಬಹಿರಂಗ ಸಭೆಯಲ್ಲಿ ತಿಳಿಸಿದರು.

ಟೆಲಿವಿಜ್ಞ ಉತ್ಸವ

ಮಾಂಟಿ ಕಾರ್ಲೊ— ಇಲ್ಲಿ ನಡೆಯುವ ಅಂತರ್ರಾಷ್ಟ್ರೀಯ ಟೆಲಿವಿಜ್ಞ ಉತ್ಸವ ದಲ್ಲಿ ಭಾರತವೂ ಸೇರಿ 36 ದೇಶಗಳು ಭಾಗವಹಿಸುವವು

ಕಳ್ಳಭಟ್ಟಿ

ಕಾರವಾರ— 4000 ಲೀಟರು ಕಳ್ಳಬಟ್ಟಿಯನ್ನು ಅರಣ್ಯ ಭಾಗದ ಮೂರು ಗ್ರಾಮಗಳಲ್ಲಿ ವಶಪಡಿಸಿಕೊಳ್ಳಲಾಯಿತು.

SHAKTI SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣೆಗೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕು

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು 4

Edited, Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore 4

ಪುರಂದರದಾಸ್ ಅಮೋಘ 7 ನೇ ವಾರ

ಶಿ ನ ಅಮೋಘ ಪ್ರಾರಂಭ

.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....

ಒರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— ಅಮೋಘ 2 ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ಪಾರ್ ಹಿ ಪಾರ್

ಶಿ ಲ

ಪಾತ್ರೆ – ವೈಜಯಂತಿ ಮಾಲ ಧರ್ಮೇಂದ್ರ

ದಿನ 3 ಆಟಗಳು

Help The Gorakshana



Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Quality Printing — Neat Binding

Lakshminarasimha Press

Sivarampet, Mysore

ದೇಶದ ಹಿತಕ್ಕಾಗಿ ಕುಟುಂಬ ಯೋಜನೆ